ಕರ್ನಾಟಕ ಸರ್ಕಾರ
GOVERNMENT OF KARNATAKA

# ಆಯವ್ಯಯ- ೨೦೧೮-೧೯
# BUDGET - 2018-19



# ಮುಖ್ಯಾಂಶಗಳು
# HIGHLIGHTS





ಂ೫ನೇ ಜುಲೈ, ೨೦೧೮
05th July, 2018



# ಆಯವ್ಯಯ 2018-19

## ಮುಖ್ಯಾಂಶಗಳು

### ಆಯವ್ಯಯ ಪಕ್ಷಿನೋಟ

- ಆಯವ್ಯಯ ಗಾತ್ರ (ಸಂಚಿತ ನಿಧಿ)- 2,18,488 ಕೋಟಿ ರೂ.ಗಳು.
- ಒಟ್ಟು ಸ್ವೀಕೃತಿ- 2,13,734 ಕೋಟಿ ರೂ. – ರಾಜಸ್ವ ಸ್ವೀಕೃತಿ 1,66,396 ಕೋಟಿ ರೂ. ಮತ್ತು 47,134 ಕೋಟಿ ರೂ. ಸಾರ್ವಜನಿಕ ಋಣ ಮತ್ತು 204 ಕೋಟಿ ರೂ. ಬಂಡವಾಳ ಸ್ವೀಕೃತಿ.
- ಒಟ್ಟು ವೆಚ್ಚ- 2,18,488 ಕೋಟಿ ರೂ., ರಾಜಸ್ವ ವೆಚ್ಚ 1,66,290 ಕೋಟಿ ರೂ. ಮತ್ತು ಬಂಡವಾಳ ವೆಚ್ಚ 41,063 ಕೋಟಿ ರೂ. ಹಾಗೂ ಸಾಲ ಮರುಪಾವತಿ 11,136 ಕೋಟಿ ರೂ.
- ಈ ಹಿಂದೆ 16ನೇ ಫೆಬ್ರವರಿ 2018ರಲ್ಲಿ ಸದನದಲ್ಲಿ ಮಂಡಿಸಿದ್ದ ಆಯವ್ಯಯದಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳ ಮುಂದುವರಿಕೆ.

**ಕೃಷಿ**

- ಕೃಷಿ ವಲಯದ ಚಟುವಟಿಕೆಗಳಲ್ಲಿ ರೈತರ ಸಹಭಾಗಿತ್ವಕ್ಕೆ ಒತ್ತು; ಪ್ರತಿ ಜಿಲ್ಲೆಯ ಇಬ್ಬರು ಪ್ರಗತಿಪರ ರೈತರನ್ನೊಳಗೊಂಡ ಕರ್ನಾಟಕ ರಾಜ್ಯ ರೈತರ ಸಲಹಾ ಸಮಿತಿ ರಚನೆ.

- ಕೋಲಾರ, ಚಿತ್ರದುರ್ಗ, ಕೊಪ್ಪಳ ಮತ್ತು ಗದಗ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ತಲಾ 5000 ಹೆಕ್ಟೇರ್ ಖುಷ್ಕಿ ಜಮೀನಿನಲ್ಲಿ ಇಸ್ರೇಲ್ ಮಾದರಿ ನೀರಾವರಿ ಸೌಲಭ್ಯ ಒದಗಿಸಲು 150 ಕೋಟಿ ರೂ. ಅನುದಾನ.

- ಆಂಧ್ರಪ್ರದೇಶ ಮಾದರಿಯಲ್ಲಿ ಶೂನ್ಯ ಬಂಡವಾಳ ಸಹಜ ಕೃಷಿಗೆ ಒತ್ತು ನೀಡುವ ಯೋಜನೆಗೆ 50 ಕೋಟಿ ರೂ. ಅನುದಾನ.

- ಕೃಷಿ ವಲಯದ ವಿವಿಧ ಇಲಾಖೆಗಳಲ್ಲಿ ಸಮನ್ವಯತೆ ಸಾಧಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೃಷಿ ಸಮನ್ವಯ ಉನ್ನತ ಸಮಿತಿ ರಚನೆ.

- ರೈತರ ಸಂಘಟನೆ ಹಾಗೂ ಸಾಮರ್ಥ್ಯ ಬಲವರ್ಧನೆ ಮಾಡಲು ರಾಜ್ಯದ ರೈತ ಉತ್ಪಾದಕ ಸಂಸ್ಥೆ (FPO) ನೀತಿ ಜಾರಿಗೆ ಕ್ರಮ.

- ರೈತರು ಅಂಟುವಾಳ ಕಾಯಿ ಮರವನ್ನು ವ್ಯಾಪಕವಾಗಿ ಬೆಳೆಯಲು ರೂಪಿಸುವ ಕಾರ್ಯಕ್ರಮಕ್ಕೆ 10 ಕೋಟಿ ರೂ. ಮೀಸಲು.

- ರೈತರ ಹಂತದಲ್ಲಿಯೇ ಸಣ್ಣ ಸಣ್ಣ ಯಂತ್ರಚಾಲಿತ ಎಣ್ಣೆ ಗಾಣಗಳನ್ನು ನೀಡಿ ಶುದ್ಧ ಎಣ್ಣೆ ಪೂರೈಕೆಗೆ ಪ್ರೋತ್ಸಾಹ. ಈ ಯೋಜನೆಗೆ 5 ಕೋಟಿ ರೂ. ಅನುದಾನ.

- ಧಾರವಾಡ ಕೃಷಿ ವಿವಿ ಅಭಿವೃದ್ಧಿಪಡಿಸಿದ ನಿರ್ವಾತ ತಂತ್ರಜ್ಞಾನವನ್ನು ರೈತರಿಗೆ ಪ್ರಚುರಪಡಿಸಲು 3 ಕೋಟಿ ರೂ. ಅನುದಾನ.

- ಕೃಷಿಗೆ ಪೂರಕ ತಂತ್ರಜ್ಞಾನ ಆವಿಷ್ಕಾರ ಮಾಡುವ ನವೋದ್ಯಮಗಳಿಗೆ ಉತ್ತೇಜನ; 5 ಕೋಟಿ ರೂ. ಅನುದಾನ.

- ಕರ್ನಾಟಕ ಅಂತರಗಂಗ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆಯ ಅಭಿವೃದ್ಧಿಗೆ 2 ಕೋಟಿ ರೂ. ಅನುದಾನ.
- ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ದೃಢೀಕರಣ ಸಂಸ್ಥೆಗೆ ಬೀಜ ಪ್ರಮಾಣೀಕರಣ ಮತ್ತು ದೃಢೀಕರಣ ಕೇಂದ್ರವನ್ನು ಸ್ಥಾಪಿಸಲು 5 ಕೋಟಿ ರೂ. ಅನುದಾನ.

**ತೋಟಗಾರಿಕೆ**

- ತೋಟಗಾರಿಕಾ ವಲಯದಲ್ಲಿ ಕಾರವಾರ, ತುಮಕೂರು, ಯಾದಗಿರಿ ಮತ್ತು ಹಾವೇರಿ ಜಿಲ್ಲೆಗಳಲ್ಲಿ ತಲಾ 5000 ಹೆಕ್ಟೇರ್ ಪ್ರದೇಶದಲ್ಲಿ ಇಸ್ರೇಲ್ ಮಾದರಿ ನೀರಾವರಿ ಸೌಲಭ್ಯ ಒದಗಿಸಲು 150 ಕೋಟಿ ರೂ. ನಿಗದಿ.
- 2017ರ ಬೇಸಿಗೆಯ ಬರಗಾಲದಿಂದ ಸಂಪೂರ್ಣವಾಗಿ ಒಣಗಿ ಅನುತ್ಪಾದಕವಾಗಿರುವ ತೆಂಗಿನ ಬೆಳೆಗಾರರ ಹಿತರಕ್ಷಣೆಗೆ 190 ಕೋಟಿ ರೂ. ಸಹಾಯಧನ.

**ರೇಷ್ಮೆ**

- ಮೈಸೂರು ಜಿಲ್ಲೆಯಲ್ಲಿ 3 ಕೋಟಿ ರೂ. ವೆಚ್ಚದಲ್ಲಿ ರೇಷ್ಮೆ ಗೂಡು ಮಾರುಕಟ್ಟೆ ಸ್ಥಾಪನೆ; 2018–19ರಲ್ಲಿ 1 ಕೋಟಿ ರೂ. ಅನುದಾನ.
- ತಲಘಟ್ಟಪುರದ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಪುನಶ್ಚೇತನಕ್ಕೆ 5 ಕೋಟಿ ರೂ. ಅನುದಾನ.
- ರೇಷ್ಮೆ ಉಪ ಉತ್ಪನ್ನಗಳಿಗೆ ಮಾರುಕಟ್ಟೆಯ ಅವಕಾಶ ಕಲ್ಪಿಸಲು 2 ಕೋಟಿ ರೂ. ಅನುದಾನ.
- ಚನ್ನಪಟ್ಟಣದಲ್ಲಿರುವ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ (ಕೆ.ಎಸ್.ಐ.ಸಿ.) ಪುನಶ್ಚೇತನಕ್ಕೆ 5 ಕೋಟಿ ರೂ. ಅನುದಾನ.

**ಪಶು ಸಂಗೋಪನೆ**

- ಧಾರವಾಡ, ಕಲಬುರಗಿ ಮತ್ತು ಮೈಸೂರಿನಲ್ಲಿ 2.25 ಕೋಟಿ ರೂ. ವೆಚ್ಚದಲ್ಲಿ ಮೂರು ವಿಭಾಗ ಮಟ್ಟದ ಘನೀಕೃತ ವೀರ್ಯನಳಿಕೆಗಳ ವಿತರಣಾ ಕೇಂದ್ರ ಸ್ಥಾಪನೆ.
- ಜಲಕೃಷಿ (hydroponics) ವಿಧಾನದಿಂದ ಹಸಿರು ಮೇವು ಉತ್ಪಾದನಾ ಘಟಕ ಸ್ಥಾಪನೆಗೆ 3 ಕೋಟಿ ರೂ. ಅನುದಾನ.
- ಹಾಸನ ಹಾಲು ಒಕ್ಕೂಟದಲ್ಲಿ 15 ಲಕ್ಷ ಲೀಟರ್ ಸಾಮರ್ಥ್ಯದ ಮೆಗಾ ಡೈರಿ ಸ್ಥಾಪನೆಗೆ 50 ಕೋಟಿ ರೂ. ಅನುದಾನ.

**ಮೀನುಗಾರಿಕೆ**

- "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ 4 ಕೋಟಿ ರೂ. ಅನುದಾನ.

**ಸಹಕಾರ**

- "ಕಾಯಕ" ಯೋಜನೆಯಡಿ ಸ್ವಸಹಾಯ ಗುಂಪುಗಳು ಸ್ವಂತ ಉದ್ಯೋಗ ಕೈಗೊಳ್ಳಲು 3000 ಸ್ವಸಹಾಯ ಗುಂಪುಗಳಿಗೆ ಸಾಲ ಒದಗಿಸಲು 5 ಕೋಟಿ ರೂ. ಅನುದಾನ.
- ರಾಜ್ಯದ 5 ನಗರ ಪ್ರದೇಶಗಳಲ್ಲಿ ಬೀದಿ ವ್ಯಾಪಾರಿಗಳು / ಸಣ್ಣ ವ್ಯಾಪಾರಿಗಳಿಗೆ ಕಿರು ಹಣಕಾಸು ಸಾಲ (Micro Finance) ಸೌಲಭ್ಯ ಒದಗಿಸಲು 'ಬಡವರ ಬಂಧು' ಸಂಚಾರಿ ಸೇವೆ ಪ್ರಾರಂಭ.

**ಕೌಶಲ್ಯಾಭಿವೃದ್ಧಿ**

- ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರದ (ಸಿಡಾಕ್) ಸಂಭಾವ್ಯ ಉದ್ದಿಮೆದಾರರಿಗೆ ತರಬೇತಿ ನೀಡುವ ದಿಶಾ ಯೋಜನೆ ಎಲ್ಲಾ ಜಿಲ್ಲೆಗಳಿಗೆ ವಿಸ್ತರಣೆ; 2 ಕೋಟಿ ರೂ. ಅನುದಾನ; 1 ಲಕ್ಷ ಜನರಿಗೆ ಪ್ರಯೋಜನ.

- ವಿದೇಶಗಳಲ್ಲಿ ಉದ್ಯೋಗ ಮತ್ತು ಜೀವನೋಪಾಯವನ್ನು ಹೊಂದಲು ರಾಜ್ಯದ ಯುವ ಜನತೆಗೆ ಅಗತ್ಯ ತರಬೇತಿ ನೀಡಲು ಕರ್ನಾಟಕ ಅಂತರಾಷ್ಟ್ರೀಯ ವಲಸಿಗ ಕೇಂದ್ರಕ್ಕೆ 2 ಕೋಟಿ ರೂ. ಅನುದಾನ.

**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ**

- ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳ ದುರಸ್ತಿಗೆ 150 ಕೋಟಿ ರೂ. ಗಳ ವಿಶೇಷ ಪ್ಯಾಕೇಜ್.

- ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ರಾಜ್ಯ ತರಬೇತಿ ಕೇಂದ್ರಗಳ ಬಲವರ್ಧನೆಗೆ 5 ಕೋಟಿ ರೂ. ಅನುದಾನ.

- 1000 ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ವಿಭಾಗ ಹೊಸದಾಗಿ ಪ್ರಾರಂಭ.

- ಮುಂದಿನ ಮೂರು ವರ್ಷದಲ್ಲಿ ಎಲ್ಲಾ 48 ಸಾವಿರ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಮತ್ತು ಮಕ್ಕಳ ಹಾಜರಾತಿಯ ನಿಗಾವಹಿಸಲು ಬಯೋಮೆಟ್ರಿಕ್ ಸಾಧನ ಅಳವಡಿಕೆ. ಪ್ರಸಕ್ತ ಸಾಲಿನಲ್ಲಿ 5 ಕೋಟಿ ರೂ. ಅನುದಾನ.

- ಆಯ್ದ 4100 ಸರ್ಕಾರಿ ಪ್ರಾಥಮಿಕ ಶಾಲೆಗಳ ಆವರಣಕ್ಕೆ ಅಂಗನವಾಡಿ ಕೇಂದ್ರಗಳ ಸ್ಥಳಾಂತರ; ಬಾಲ ಸ್ನೇಹಿ ಕೇಂದ್ರಗಳಾಗಿ ಬಲವರ್ಧನೆ; ಎಲ್‌ಕೆಜಿ, ಯುಕೆಜಿ ತರಗತಿಗಳ ಪ್ರಾರಂಭ.

- ಒಂದು ಕಿ.ಮೀ ವ್ಯಾಪ್ತಿಯಲ್ಲಿ ಕಡಿಮೆ ದಾಖಲಾತಿ ಹೊಂದಿರುವ 28847 ಸರ್ಕಾರಿ ಮತ್ತು ಅನುದಾನಿತ ಶಾಲೆಗಳನ್ನು ಹತ್ತಿರದ 8530 ಸರ್ಕಾರಿ ಶಾಲೆಗಳೊಂದಿಗೆ ವಿಲೀನಗೊಳಿಸಲು ಕ್ರಮ.

## ಉನ್ನತ ಶಿಕ್ಷಣ

- ರಾಜ್ಯದ ಸರ್ಕಾರಿ ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ 250 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್.
- ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯವೇ ಬುನಾದಿಯಾದ ಹೊಸ ವಿಶ್ವವಿದ್ಯಾಲಯಗಳ ಪ್ರಾರಂಭ; 9 ಕೋಟಿ ರೂ. ಅನುದಾನದಲ್ಲಿ ತುಮಕೂರು ಜಿಲ್ಲೆಯಲ್ಲಿ ಕ್ರೀಡೆ ಮತ್ತು ಅಂಗಸಾಧನೆಗೆ ಸಂಬಂಧಿಸಿದ ವಿಶ್ವವಿದ್ಯಾಲಯ, ಶಿವಮೊಗ್ಗ ಜಿಲ್ಲೆಯಲ್ಲಿ ತಾಯಿನಾಡು ಭದ್ರತಾ ವಿಶ್ವವಿದ್ಯಾಲಯ, ಹಂಪಿಯಲ್ಲಿ ಪ್ರವಾಸೋದ್ಯಮ ವಿಶ್ವವಿದ್ಯಾಲಯ ಸ್ಥಾಪನೆಗೆ ಕ್ರಮ
- ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮಾಹಿತಿ ಸಂವಹನ ತಂತ್ರಜ್ಞಾನ (ಐ.ಸಿ.ಟಿ) ಬಳಕೆಯ ಮೂಲಕ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ.
- ಹಳೆ ವಿದ್ಯಾರ್ಥಿಗಳ ನೆರವಿನೊಂದಿಗೆ ಶಾಲೆಗಳ ಮೂಲಭೂತ ಸೌಕರ್ಯ ಬಲವರ್ಧಿಸಲು ಕ್ರೌಡ್ ಫಂಡಿಂಗ್ ಪೋರ್ಟಲ್ ಆರಂಭ. ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಕಾರ್ಯಕ್ರಮದಲ್ಲಿ ಸಹಾಯ ಮಾಡುವವರಿಗೂ ಈ ಪೋರ್ಟಲ್ ಮೂಲಕ ಶಾಲೆಗಳಿಗೆ ನೆರವು; 3 ಕೋಟಿ ರೂ. ಅನುದಾನ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ

- ಕರೆ ಸಂಖ್ಯೆ: 108 ಮತ್ತು 104 ರಲ್ಲಿ ಲಭ್ಯವಿರುವ ತುರ್ತು ಪ್ರತಿಕ್ರಿಯೆ ವ್ಯವಸ್ಥೆ (Emergency Response Services) ಮತ್ತು ವೈದ್ಯಕೀಯ ಸಹಾಯವಾಣಿ ಸೇವೆಗಳ ವ್ಯಾಪ್ತಿಯ ವಿಸ್ತರಣೆ.

ಇದರಲ್ಲಿ ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳು ಮತ್ತು ಮಾನಸಿಕ ಆರೋಗ್ಯ ರಕ್ಷಣಾ ಸೇವೆಗಳ ಸಂಯೋಜನೆಗೆ ಕ್ರಮ.

- ಮುಂದಿನ ಎರಡು ವರ್ಷಗಳಲ್ಲಿ ಔಷಧ ನಿಯಂತ್ರಣ ವ್ಯವಸ್ಥೆ ಬಲಪಡಿಸಲು 40 ಕೋಟಿ ರೂ. ವೆಚ್ಚದ ಯೋಜನೆ ಜಾರಿ.
- ಬಡ ರೋಗಿಗಳಿಗೆ ಹೃದಯ, ಮೂತ್ರಪಿಂಡ, ಯಕೃತ್ತು ಇತ್ಯಾದಿ ಅಂಗಾಂಗ ಕಸಿಗಾಗಿ ಪ್ರತ್ಯೇಕ ಯೋಜನೆಗೆ 30 ಕೋಟಿ ರೂ. ಅನುದಾನ.
- ವಿಜಯಪುರ ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಡಿಯಾಲಜಿ, ಆಂಕಾಲಜಿ ಆರೋಗ್ಯ ಸೇವೆಯ ಘಟಕ ಹಾಗೂ ಟ್ರಾಮಾ ಘಟಕ ಸ್ಥಾಪನೆ.

**ವೈದ್ಯಕೀಯ ಶಿಕ್ಷಣ**

- ಕನಕಪುರದಲ್ಲಿ ಹೊಸ ವೈದ್ಯಕೀಯ ಕಾಲೇಜು ಸ್ಥಾಪನೆ.
- ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಯನ್ನು 800 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು 30 ಕೋಟಿ ರೂ. ಅನುದಾನ.
- ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ bone marrow transplant ಚಿಕಿತ್ಸೆಗಾಗಿ ಪ್ರತ್ಯೇಕ ಘಟಕ ಸ್ಥಾಪಿಸಲು 12 ಕೋಟಿ ರೂ. ಅನುದಾನ.
- ರಾಮನಗರದಲ್ಲಿ 40 ಕೋಟಿ ರೂ. ವೆಚ್ಚದಲ್ಲಿ 300 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತೆರೆಯಲು ಕ್ರಮ.
- ಬೆಳಗಾವಿ, ಕಲಬುರಗಿ ಮತ್ತು ಮೈಸೂರು ನಗರಗಳಲ್ಲಿ ಹೃದ್ರೋಗ ಮತ್ತು ಕ್ಯಾನ್ಸರ್ ಹಾಗೂ ಇತರ ರೋಗಗಳಿಗೆ ಸಂಬಂಧಿಸಿದ ತೃತೀಯ ಹಂತದ ಆರೋಗ್ಯ ಸೇವೆ ಒದಗಿಸಲು ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪ್ರಾರಂಭ. ಗದಗ, ಕೊಪ್ಪಳ, ಚಾಮರಾಜನಗರ ಮತ್ತು ಹಾಸನ ನಗರಗಳ ವೈದ್ಯಕೀಯ ಕಾಲೇಜುಗಳಲ್ಲಿ 450

ಹಾಸಿಗೆ ಸಾಮರ್ಥ್ಯದ ಹೊಸ ಆಸ್ಪತ್ರೆ ಸ್ಥಾಪನೆ. 200 ಕೋಟಿ ರೂ. ಅನುದಾನ.

**ಪ್ರವಾಸೋದ್ಯಮ**

- ಪ್ರವಾಸೋದ್ಯಮದ ಮೂಲಕ ಉದ್ಯೋಗ ಸೃಷ್ಟಿಗೆ ಆದ್ಯತೆ.
- ಈ ವರ್ಷ ಬೇಲೂರು, ಹಂಪಿ ಮತ್ತು ವಿಜಯಪುರದಲ್ಲಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗೆ ಸಂಕಲ್ಪ. ಈ ನಿಟ್ಟಿನಲ್ಲಿ ಯುವಕ ಯುವತಿಯರಿಗೆ ಕೌಶಲ್ಯ ತರಬೇತಿಗಾಗಿ ಮುಂದೆ ಬರುವ ಖಾಸಗಿ ತರಬೇತಿ ಸಂಸ್ಥೆಗಳಿಗೆ ತಲಾ 60 ಲಕ್ಷ ರೂ.ಗಳ ಷೇರು ಬಂಡವಾಳ ಹೂಡಿಕೆ; ಈ ಮೂರು ಪ್ರವಾಸಿ ಕೇಂದ್ರಗಳಲ್ಲಿ ಪರಿಸರ ಹಾಗೂ ಆಹಾರದ ಶುದ್ಧತೆಯನ್ನು ಕಾಪಾಡಲು ಸರ್ಕಾರಿ ಸ್ಥಳೀಯ ಸಂಸ್ಥೆಗಳಿಗೆ 20 ಕೋಟಿ ರೂ. ಅನುದಾನ.
- ಪ್ರವಾಸೋದ್ಯಮಕ್ಕೆ ಬೇಕಾಗುವ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಮುಂದೆ ಬರುವ ಖಾಸಗಿ ಸಂಸ್ಥೆಗಳಲ್ಲಿ ಶೇ.30ರಷ್ಟು ಷೇರು ಬಂಡವಾಳ ಹೂಡಿಕೆ; ಪ್ರವಾಸಿ ಉದ್ಯಮಗಳಲ್ಲಿ ಹೂಡಿಕೆ ಮಾಡಲು ಈ ವರ್ಷ 80 ಕೋಟಿ ರೂ. ನಿಗದಿ.
- ಕೆ.ಎಸ್.ಟಿ.ಡಿ.ಸಿ ಸಂಸ್ಥೆಗೆ ಹೋಟೆಲ್ ಸೌಲಭ್ಯ ಕಲ್ಪಿಸಲು 80 ಕೋಟಿ ರೂ.
- ಪ್ರಮುಖ ಹೆದ್ದಾರಿಗಳಲ್ಲಿ ಪ್ರವಾಸಿಗರಿಗಾಗಿ ಮೂರು ಮಾದರಿ ರಸ್ತೆ ಬದಿ ಸೌಲಭ್ಯಗಳ (Model way side Facilities) ನಿರ್ಮಾಣ.
- ಜಗತ್ಪ್ರಸಿದ್ಧ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತ ಪ್ರದೇಶಗಳಲ್ಲಿ ಪ್ರವಾಸಿಗರಿಗೆ ಅನುಕೂಲವಾಗುವ ಹೆಚ್ಚುವರಿ ಪ್ರವಾಸಿ ಸೌಲಭ್ಯ ಒದಗಿಸಲು 5 ಕೋಟಿ ರೂ. ಅನುದಾನ.
- ರಾಮನಗರದ ಬಳಿ ಆರ್ಟ್ಸ್ ಅಂಡ್ ಕ್ರಾಫ್ಟ್ ವಿಲೇಜ್ ಮತ್ತು ಕಣ್ವ ಜಲಾಶಯದ ಪ್ರದೇಶದಲ್ಲಿ ಚಿಲ್ಡ್ರನ್ಸ್ ವರ್ಲ್ಡ್ ಯೋಜನೆ ಖಾಸಗಿ ಸಹಭಾಗಿತ್ವದೊಂದಿಗೆ ಅಭಿವೃದ್ಧಿ.

## ಸಮಾಜ ಕಲ್ಯಾಣ

- ಗಂಗಾ ಕಲ್ಯಾಣ ಯೋಜನೆಯಡಿ ಸಹಾಯಧನ ಮಿತಿ 50 ಸಾವಿರ ರೂ. ಗಳಷ್ಟು ಹೆಚ್ಚಳ.
- "ಸಾಮಾಜಿಕ ಉದ್ಯಮಶೀಲತಾ ಯೋಜನೆ"ಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 5000 ನಿರುದ್ಯೋಗಿ ಯುವಕ / ಯುವತಿಯರಿಗೆ ಆದಾಯ ಬರುವ ಆರ್ಥಿಕ ಚಟುವಟಿಕೆ ಪ್ರಾರಂಭಿಸಲು ಗರಿಷ್ಠ 10 ಲಕ್ಷ ರೂ. ಆರ್ಥಿಕ ನೆರವು.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 5000 ನಿರುದ್ಯೋಗಿಗಳಿಗೆ 15 ಕೋಟಿ ರೂ. ವೆಚ್ಚದಲ್ಲಿ ಉದ್ಯೋಗಾಧಾರಿತ ತಾಂತ್ರಿಕ ತರಬೇತಿ.
- ಕಲಬುರಗಿ ನಗರದಲ್ಲಿ ಖಾಸಗಿ ತರಬೇತಿ ಕೇಂದ್ರಗಳ ಸಹಯೋಗದೊಂದಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪದವೀಧರರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ನೆರವು.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿ/ ತಾಂಡಗಳ ಸಮಗ್ರ ಅಭಿವೃದ್ಧಿಗೆ ತಲಾ ಕನಿಷ್ಠ 1 ಕೋಟಿ ರೂ.ಗಳಿಂದ ಗರಿಷ್ಠ 5 ಕೋಟಿ ರೂ. ಗಳವರೆಗೆ ಅನುದಾನ ಒದಗಿಸುವ "ಪ್ರಗತಿ ಕಾಲೋನಿ" ಯೋಜನೆ ಜಾರಿ.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಪ್ರತಿಷ್ಠಿತ ಕ್ರೀಡಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡಲು 2 ಕೋಟಿ ರೂ. ಅನುದಾನ.
- ಆಯ್ದ ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡಗಳ ಮಾದರಿ/ ನವಗ್ರಾಮಗಳ ನಿರ್ಮಾಣ; ಆದಿವಾಸಿ ಸಮುದಾಯಗಳಿಗೆ ಆದ್ಯತೆ.
- ಪರಿಶಿಷ್ಟ ಪಂಗಡದ ಯುವಕರು ಹಾಗೂ ನಿರುದ್ಯೋಗಿಗಳಿಗೆ ಟ್ಯಾಕ್ಸಿ, ಹೋಂ ಸ್ಟೇ ಇತರೆ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿ.

- ಶಿಳ್ಳೇಕ್ಯಾತ, ದೊಂಬಿದಾಸ, ಗೌಳಿ, ಹೆಳವ, ಶಿಕಾರಿಗಳು, ಹೂವಾಡಿಗ, ಕಂಚುಗಾರ, ಕಮ್ಮಾರ, ದರ್ಜಿ, ದೇವಾಡಿಗ, ಬುಡಬುಡಿಕೆ, ತಿಗಳ, ಬಡಿಗೆ, ಹಟ್ಗಾರ, ಕರೆಒಕ್ಕಲಿಗ ಇತ್ಯಾದಿ ಅತ್ಯಂತ ಹಿಂದುಳಿದ ಸಮಾಜಗಳ ಅಭಿವೃದ್ಧಿಗಾಗಿ 10 ಕೋಟಿ ರೂ. ಅನುದಾನ.
- ಜಾತ್ಯತೀತವಾಗಿ ದಾಸೋಹ, ಶಿಕ್ಷಣ, ಸಾಮಾಜಿಕ ಸೇವೆ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ವಿವಿಧ ಧಾರ್ಮಿಕ ಪೀಠಗಳು ಹಾಗೂ ಸಂಘ ಸಂಸ್ಥೆಗಳಿಗೆ ಒಟ್ಟು 25 ಕೋಟಿ ರೂ. ಅನುದಾನ.

**ಆಹಾರ ಮತ್ತು ನಾಗರಿಕ ಸರಬರಾಜು**

- ಅನ್ನಭಾಗ್ಯ ಯೋಜನೆಯ ಮೌಲ್ಯವರ್ಧನೆ; ಪ್ರತಿ ಫಲಾನುಭವಿಗೆ 5 ಕೆ.ಜಿ ಉಚಿತ ಅಕ್ಕಿ ಮತ್ತು ರಿಯಾಯಿತಿ ದರದಲ್ಲಿ ಅರ್ಧ ಕೆ.ಜಿ. ತೊಗರಿಬೇಳೆ ಹಾಗೂ ಪ್ರತಿ ಬಿಪಿಎಲ್ ಪಡಿತರ ಚೀಟಿಗೆ 1 ಕೆ.ಜಿ. ಪಾಮ್ ಎಣ್ಣೆ, 1 ಕೆ.ಜಿ. ಅಯೋಡಿನ್ ಮತ್ತು ಕಬ್ಬಿಣಾಂಶಯುಕ್ತ ಉಪ್ಪು ಹಾಗೂ 1 ಕೆ.ಜಿ. ಸಕ್ಕರೆ ವಿತರಣೆ.
- ವರ್ಷಕ್ಕೊಂದು ತಿಂಗಳು ಆಹಾರ ಸುರಕ್ಷಾ ಮಾಹೆ ಆಯೋಜನೆ; ಜಾಗೃತ ಸಮಿತಿಯ ಸದಸ್ಯರ ಸಹಕಾರದೊಂದಿಗೆ ಪಡಿತರ ಚೀಟಿಗಳ ವಾರ್ಷಿಕ ಪರಿಷ್ಕರಣೆ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ**

- "ಮುಖ್ಯಮಂತ್ರಿ ಮಾತೃಶ್ರೀ ಯೋಜನೆ" 2018ರ ನವೆಂಬರ್ 1 ರಿಂದ ಜಾರಿ; ಬಿಪಿಎಲ್ ಕುಟುಂಬದ ಗರ್ಭಿಣಿಯರಿಗೆ ಮೂರು ತಿಂಗಳು ಹಾಗೂ ಬಾಣಂತಿಯರಿಗೆ ಮೂರು ತಿಂಗಳ ಅವಧಿಗೆ ಮಾಸಿಕ 1,000 ರೂ. ನಂತೆ ಒಟ್ಟು 6,000 ರೂ. ನೀಡಲು ಕ್ರಮ; ಈ ಯೋಜನೆಗೆ 350 ಕೋಟಿ ರೂ. ಅನುದಾನ.
- 'ಆಧಾರ' ಸ್ವಯಂ ಉದ್ಯೋಗ ಯೋಜನೆಯ ಘಟಕ ವೆಚ್ಚ 1 ಲಕ್ಷ ರೂ.ಗಳಿಗೆ ಹೆಚ್ಚಳ; ಇದರಲ್ಲಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲು ಕ್ರಮ.

- 2016ರ ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯಡಿ ಎಲ್ಲಾ 21 ವಿಧದ ವಿಕಲಚೇತನ ವ್ಯಕ್ತಿಗಳ ಸಮೀಕ್ಷೆಗೆ 5 ಕೋಟಿ ರೂ. ಅನುದಾನ.
- ಪ್ರಸ್ತುತ ಜಿಲ್ಲೆಗೊಂದರಂತೆ ಇರುವ ವೃದ್ಧಾಶ್ರಮವನ್ನು ರಾಜ್ಯದ ಎಲ್ಲಾ ಉಪವಿಭಾಗಗಳಿಗೆ ತಲಾ ಒಂದರಂತೆ ವಿಸ್ತರಣೆಗೆ ಕ್ರಮ.
- ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದಿಂದ ವಿಕಲಚೇತರಿಗೆ ನೀಡಿರುವ ಸಾಲ ಮತ್ತು 2014 ರಿಂದ ಸುಸ್ತಿಯಾಗಿರುವ ಬಡ್ಡಿ ಮೊತ್ತ ಮನ್ನಾ ಮಾಡಲು 4 ಕೋಟಿ ರೂ. ಅನುದಾನ.
- ವಿಕಲಚೇತನ ಪಾಲನೆ ಹಾಗೂ ನಿರ್ವಹಣೆ ಬಗ್ಗೆ ಪಾಲಕರಿಗೆ ತರಬೇತಿ ನೀಡಲು 20 ಎಕರೆ ಜಾಗದಲ್ಲಿ ಸರ್ಕಾರ ಹಾಗೂ ಖಾಸಗಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ವಿಕಲಚೇತನರ ಕ್ಯಾಂಪಸ್ ಪ್ರಾರಂಭ.
- ಬೆಂಗಳೂರಿನ ಇಂದಿರಾನಗರದಲ್ಲಿರುವ ಸರ್ಕಾರಿ ಕಿವುಡು ಮಕ್ಕಳ ಶಾಲೆಯ ಕಟ್ಟಡದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ವಿಶೇಷ ಶಿಕ್ಷಕರ ಶಿಕ್ಷಣಕ್ಕಾಗಿ ತರಬೇತಿ ಕೇಂದ್ರ ಪ್ರಾರಂಭ.
- ಪಿ.ಹೆಚ್.ಡಿ. ಮಾಡುತ್ತಿರುವ ಹಾಗೂ ವಿದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಕೈಗೊಳ್ಳುವ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು 1 ಕೋಟಿ ರೂ. ಅನುದಾನ.
- ವಿವಿಧ ಅಭಿವೃದ್ಧಿ ಇಲಾಖೆಗಳ ಸಹಭಾಗಿತ್ವದಲ್ಲಿ ಲೈಂಗಿಕ ಕಾರ್ಯಕರ್ತೆಯರ ಜೀವನಕ್ಕೆ ಭದ್ರತೆ ಒದಗಿಸುವ ಕಾರ್ಯಕ್ರಮ ಜಾರಿ.

**ವಾಣಿಜ್ಯ ಮತ್ತು ಕೈಗಾರಿಕೆ**

ಕರ್ನಾಟಕದಲ್ಲಿ ಕೈಗಾರಿಕಾ ವಲಯದ ಉತ್ಪಾದನಾ ಸಾಮರ್ಥ್ಯ ವೃದ್ಧಿಗೆ "Compete with China" "ಚೀನಾ ದೇಶದೊಂದಿಗೆ ಸಕಾರಾತ್ಮಕ ಸ್ಪರ್ಧೆ" ಯೋಜನೆ ಪ್ರಾರಂಭ; ಈ ನಿಟ್ಟಿನಲ್ಲಿ ಕಲಬುರಗಿಯನ್ನು ಸೋಲಾರ್ ಜಿಲ್ಲೆಯನ್ನಾಗಿ, ಚಿತ್ರದುರ್ಗ

ಜಿಲ್ಲೆಯಲ್ಲಿ ಗೃಹೋಪಯೋಗಿ LED Light ಗಳನ್ನು ಉತ್ಪಾದನೆ ಮಾಡುವ ಉದ್ಯಮ ಅಭಿವೃದ್ಧಿ, ಹಾಸನ ಜಿಲ್ಲೆಯನ್ನು ಸ್ನಾನಗೃಹ ನೆಲಹಾಸು ಮತ್ತು ಸ್ಯಾನಿಟರಿ ಉಪಕರಣಗಳ ಉತ್ಪಾದಕ ಜಿಲ್ಲೆಯಾಗಿ ಅಭಿವೃದ್ಧಿ, ಕೊಪ್ಪಳ ಜಿಲ್ಲೆಯಲ್ಲಿ ಆಟಿಕೆ ಸಾಮಾನುಗಳ ಉತ್ಪಾದನಾ ಕ್ಲಸ್ಟರ್, ಮೈಸೂರಿನಲ್ಲಿ ಐಸಿ ಚಿಪ್ ತಯಾರಿಕಾ ವಲಯ, ಬಳ್ಳಾರಿಯಲ್ಲಿ ವಸ್ತ್ರ ಉದ್ಯಮ, ಚಿಕ್ಕಬಳ್ಳಾಪುರದಲ್ಲಿ ಮೊಬೈಲ್ ಫೋನ್ ಬಿಡಿಘಟಕಗಳ ಉದ್ಯಮ ಸ್ಥಾಪಿಸಲು ಕ್ರಮ. ತುಮಕೂರಿನಲ್ಲಿ ಸ್ಪೋರ್ಟ್ಸ್ ಮತ್ತು ಫಿಟ್‌ನೆಸ್ ವಸ್ತುಗಳ ಉತ್ಪಾದನೆಗೆ ಕ್ರಮ; ಬೀದರ್ ಜಿಲ್ಲೆಯಲ್ಲಿ ಕೃಷಿ ಉಪಕರಣ ಯಂತ್ರ ತಯಾರಿಕೆಗೆ ಒತ್ತು.

- ಈ ಕಾರ್ಯಕ್ರಮದಿಂದ ಜಿಲ್ಲೆಗೆ ತಲಾ ಒಂದು ಲಕ್ಷದಂತೆ ಒಟ್ಟು 8 ಲಕ್ಷ ಉದ್ಯೋಗ ಸೃಷ್ಟಿಯ ನಿರೀಕ್ಷೆ
- ಮುಂದಿನ ವರ್ಷಗಳಲ್ಲಿ ಸರ್ಕಾರದಿಂದ ಈ ಯೋಜನೆಗೆ 14,000 ಕೋಟಿ ರೂ. ಬಂಡವಾಳ ಹೂಡಿಕೆ.

- ಕೈಗಾರಿಕಾ ಸಂಸ್ಥೆಗಳು ಹಾಗೂ ವಿವಿಧ ಸಂಬಂಧಿತ ಇಲಾಖೆಗಳ ಸಹಯೋಗದೊಂದಿಗೆ ಕೇಂದ್ರೀಕೃತ ತಪಾಸಣಾ ವ್ಯವಸ್ಥೆ ರೂಪಿಸಲು ಕ್ರಮ.
- KIADB ಮತ್ತು KSIIDC ಗಳು ಕೈಗಾರಿಕಾ ಪ್ರದೇಶ / ವಸಾಹತು ಅಭಿವೃದ್ಧಿಪಡಿಸಿದ ಕೂಡಲೇ ಅಂತಿಮ ಹಂಚಿಕೆ ದರ ನಿಗದಿಪಡಿಸಲು ಕ್ರಮ.
- ತೆಂಗಿನ ನಾರಿನ ವಲಯಕ್ಕೆ ಉತ್ತೇಜನ ನೀಡಲು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಪ್ರತಿ ಕುಶಲಕರ್ಮಿಗೆ ವಾರ್ಷಿಕ 10,000/- ರೂ. ಪ್ರೋತ್ಸಾಹ ವೇತನ.
- ಸೂಕ್ಷ್ಮ ಮತ್ತು ಸಣ್ಣ ತೆಂಗಿನ ನಾರಿನ ಕೈಗಾರಿಕೆಗಳು ಉತ್ಪಾದಿಸುವ ಉತ್ಪನ್ನಗಳಿಗೆ ಶೇ.10ರ ದರದಲ್ಲಿ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ.

- ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳ ಉದ್ದೇಶಕ್ಕೆ ಕೃಷಿ ಭೂಮಿ ಖರೀದಿಸುವ ಪ್ರಕ್ರಿಯೆ ಸರಳಗೊಳಿಸಲು ಕ್ರಮ; ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಜನೆಗೆ ಅವಕಾಶ.

- ರಾಜ್ಯದಲ್ಲಿನ ಎಲ್ಲಾ ಕಲ್ಲುಗಣಿ ಗುತ್ತಿಗೆದಾರರಿಗೆ "ಗಣಿಗಾರಿಕೆ ಹಾಗೂ ಗಣಿ ಸುರಕ್ಷತ ವಿಧಾನಗಳ ತರಬೇತಿ ಕೋರ್ಸ್" ಆಯೋಜನೆಗೆ ಕ್ರಮ; ಹಾಲಿ ಚಾಲ್ತಿಯಲ್ಲಿರುವ ಕಲ್ಲು ಗಣಿಗುತ್ತಿಗೆದಾರರಿಗೆ ಹಾಗೂ ಹೊಸದಾಗಿ ಪರವಾನಗಿ ಪಡೆಯುವ ಗುತ್ತಿಗೆದಾರರಿಗೆ ಈ ತರಬೇತಿ ಕಡ್ಡಾಯ.

- ಸಾರ್ವಜನಿಕರಿಗೆ Appನಲ್ಲಿ ಕಲ್ಲು ಗಣಿಗುತ್ತಿಗೆ ಮತ್ತು ಕ್ರಷರ್‌ಗಳ ಮಾಹಿತಿ ಒದಗಿಸಲು ಕ್ರಮ.; ಸಗಟು ದರದಲ್ಲಿ ಕಟ್ಟಡ ಕಲ್ಲು, ಜಲ್ಲಿ ಇತ್ಯಾದಿ ಪಡೆಯಲು ಅನುಕೂಲ.

- ಗುಣಮಟ್ಟದ ಮರಳು ಮತ್ತು ಜಲ್ಲಿ ಸ್ಪರ್ಧಾತ್ಮಕ ದರದಲ್ಲಿ ಸುಲಭವಾಗಿ ದೊರಕುವಂತೆ ಮಾಡಲು ದಾಸ್ತಾನು ಕೇಂದ್ರ ಪ್ರಾರಂಭ.

- ಸಿದ್ಧ ಉಡುಪು ವಲಯಕ್ಕೆ ಆದ್ಯತೆ ನೀಡುವ ಹೊಸ ಜವಳಿ ನೀತಿ ಘೋಷಣೆ.

- ನೇಕಾರರಿಗೆ ಹೊಸ ವಿನ್ಯಾಸ ತಂತ್ರಜ್ಞಾನ ವರ್ಗಾವಣೆಗೆ ಅತ್ಯಾಧುನಿಕ ಕೈಮಗ್ಗ ಕೇಂದ್ರ ಸ್ಥಾಪನೆ.

- ಶತಮಾನದ ಹಿನ್ನೆಲೆಯುಳ್ಳ, ಹಾಸನದ ಕರ್ನಾಟಕ ಇಂಪ್ಲಿಮೆಂಟ್ ಮ್ಯಾನ್ಯುಫಾಕ್ಚರಿಂಗ್ ಕಂಪೆನಿಯ ಪುನರುಜ್ಜೀವನ ಮತ್ತು ಆಧುನೀಕರಣಕ್ಕಾಗಿ 10 ಕೋಟಿ ರೂ.

- ಪ್ಲಾಸ್ಟಿಕ್ ನಿಷೇಧದ ಹಿನ್ನೆಲೆಯಲ್ಲಿ ಪರ್ಯಾಯ ಪ್ಯಾಕಿಂಗ್ ತಂತ್ರಜ್ಞಾನ ಅಭಿವೃದ್ಧಿ ಸಂಸ್ಥೆ ಸ್ಥಾಪಿಸಲು 5 ಕೋಟಿ ರೂ. ಅನುದಾನ.

**ಸಾರ್ವಜನಿಕ ಉದ್ದಿಮೆಗಳು**

- ಷೇರು ಮಾರುಕಟ್ಟೆಯ ಲಿಸ್ಟೆಡ್ ಕಂಪೆನಿಗಳ ಪಟ್ಟಿಗೆ ಲಾಭದಲ್ಲಿರುವ ಸರ್ಕಾರಿ ಸ್ವಾಮ್ಯದ ಮೂರು ಕಂಪೆನಿಗಳ ಸೇರ್ಪಡೆ.

**ಇಂಧನ**

- ವಿದ್ಯುತ್ ಪ್ರಸರಣಾ ಜಾಲ ಬಲವರ್ಧನೆಗೆ 35 ವಿದ್ಯುತ್ ಉಪಕೇಂದ್ರ ಸ್ಥಾಪನೆ; 75 ಉಪ ಕೇಂದ್ರ ಮೇಲ್ದರ್ಜೆಗೆ ಏರಿಕೆ.
- ಬೆಂಗಳೂರು ನಗರದಲ್ಲಿ ಎಲ್ಲಾ Overhead ಮಾರ್ಗಗಳನ್ನು ಭೂಗತ ಮಾರ್ಗ (Underground Cable) ಗಳಾಗಿ ಪರಿವರ್ತಿಸಲು ವಿಸ್ತೃತ ಯೋಜನೆ ತಯಾರಿ; ಹಂತ ಹಂತವಾಗಿ ಅನುಷ್ಠಾನಕ್ಕೆ ಕ್ರಮ.

**ವಸತಿ**

- ಬೆಂಗಳೂರು ನಗರದ ಬಡವರಿಗಾಗಿ ಜಾರಿಗೊಳಿಸಿದ 'ಮುಖ್ಯಮಂತ್ರಿಯವರ ಒಂದು ಲಕ್ಷ ಮನೆಗಳು' ಯೋಜನೆ ಎಲ್ಲಾ ನಗರಗಳಿಗೆ ವಿಸ್ತರಣೆ.
- ಬೆಂಗಳೂರು ನಗರದಲ್ಲಿ ಬಡವರಿಗೆ ಬಹುಮಹಡಿ ಮನೆಗಳ ನಿರ್ಮಾಣ.
- ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಕೊಳೆಗೇರಿಗಳ ಅಭಿವೃದ್ಧಿ; 2019–20 ರಿಂದ ಮಾರ್ಗಸೂಚಿ ಜಾರಿ.
- ವಿಕಲಚೇತನ ಫಲಾನುಭವಿಗಳಿಗೆ "ಬೇಡಿಕೆಯ ಮೇರೆಗೆ" ಆನ್‌ಲೈನ್‌ನಲ್ಲಿ ಅರ್ಜಿ ಪಡೆದು ಮನೆ ಹಂಚಿಕೆ.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**

- ಗ್ರಾಮೀಣ ಪ್ರದೇಶಗಳಿಗೆ ಜೀವನದಿ ಅಥವಾ ಜಲಾಶಯಗಳಿಂದ 85 LPCD ನೀರು ಒದಗಿಸಲು 53,000 ಕೋಟಿ ರೂ.ಗಳ 'ಜಲಧಾರೆ ಯೋಜನೆ'ಗೆ ಚಾಲನೆ; ಯೋಜನೆಯ ಡಿಪಿಆರ್ ತಯಾರಿಕೆಗೆ ಕ್ರಮ.

- ಶ್ರೀರಂಗಪಟ್ಟಣ ತಾಲ್ಲೂಕಿನ 29 ಹಳ್ಳಿಗಳಿಗೆ 42.9 ಕೋಟಿ ರೂ. ವೆಚ್ಚದಲ್ಲಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಜಾರಿ.

**ಜಲ ಸಂಪನ್ಮೂಲ**

- ಮೇಕೆದಾಟು ಯೋಜನೆ ಕಾರ್ಯಗತಗೊಳಿಸಲು ಕ್ರಮ.
- ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಅಮೆರಿಕಾದ ಡಿಸ್ನಿಲ್ಯಾಂಡ್ ಮಾದರಿಯಲ್ಲಿ ಕೆ.ಆರ್.ಎಸ್. ಅಭಿವೃದ್ಧಿಗೆ ಕ್ರಮ. ಡಿಪಿಆರ್ ತಯಾರಿಕೆಗೆ 5 ಕೋಟಿ ರೂ. ಅನುದಾನ.
- ಮಹದಾಯಿ ನದಿ ವಿವಾದದ ನ್ಯಾಯಾಧಿಕರಣ ತೀರ್ಪು ಆಗಸ್ಟ್ 2018 ರಲ್ಲಿ ಬರುವ ನಿರೀಕ್ಷೆ; ತೀರ್ಪಿನ ಅನ್ವಯ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮ.
- ಕೃಷ್ಣಾ ಮೇಲ್ದಂಡೆ ಯೋಜನೆ 3 ನೇ ಹಂತದ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾರ್ಯಕ್ಕೆ ಚುರುಕು.

**ಸಣ್ಣ ನೀರಾವರಿ**

- ಹಾಸನ ತಾಲ್ಲೂಕು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ ವ್ಯಾಪ್ತಿಯ 160 ಕೆರೆಗಳಿಗೆ 70 ಕೋಟಿ ರೂ. ವೆಚ್ಚದಲ್ಲಿ ಹೇಮಾವತಿ ನದಿಯಿಂದ ನೀರು ತುಂಬಿಸುವ ಯೋಜನೆ ಜಾರಿ.
- ಲೋಕಪಾವನಿ ನದಿಯಿಂದ ಮಂಡ್ಯ ಜಿಲ್ಲೆಯ ದುದ್ದ ಹಾಗೂ ಇತರೆ ಕೆರೆಗಳಿಗೆ ನೀರು ತುಂಬಿಸುವ ಹಾಗೂ ಮಂಡ್ಯ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗೆ 30 ಕೋಟಿ ರೂ.ಗಳ ಅನುದಾನ.
- ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯಿಂದ 100 ಕೋಟಿ ರೂ. ವೆಚ್ಚದಲ್ಲಿ ಏತ ನೀರಾವರಿ ಯೋಜನೆ ಜಾರಿ; ಸುಮಾರು 10,225 ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ.

**ಕಂದಾಯ**

- ಸಂಧ್ಯಾ ಸುರಕ್ಷಾ ಯೋಜನೆ ಮಾಸಾಶನ ಮೊತ್ತ ಸಾವಿರ ರೂ.ಗಳಿಗೆ ಹೆಚ್ಚಳ. 32.92 ಲಕ್ಷ ಫಲಾನುಭವಿಗಳಿಗೆ ಅನುಕೂಲ; 660 ಕೋಟಿ ರೂ. ಹೆಚ್ಚುವರಿ ಅನುದಾನ; 1ನೇ ನವೆಂಬರ್ 2018 ರಿಂದ ಜಾರಿ.
- ಐದು ಜಿಲ್ಲೆಗಳಲ್ಲಿ ಮರು ಭೂಮಾಪನಾ ಕಾರ್ಯ ಪ್ರಾರಂಭ.
- 50 ನಾಡಕಛೇರಿಗಳಿಗೆ ಮೂಲಸೌಕರ್ಯ ಅಭಿವೃದ್ಧಿಗಾಗಿ 10 ಕೋಟಿ ರೂ. ಅನುದಾನ.

**ಮುಜರಾಯಿ**

- ಬ್ರಾಹ್ಮಣ ಸಮುದಾಯದ ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಗಾಗಿ "ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ" ಸ್ಥಾಪನೆಗೆ 25 ಕೋಟಿ ರೂ. ಅನುದಾನ.

**ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ**

- ವಾಯು ಮಾಲಿನ್ಯ ನಿಯಂತ್ರಣಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 96 ಕೋಟಿ ರೂ. ವೆಚ್ಚದಲ್ಲಿ 42 ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳ (Continuous Ambient Air Quality Monitoring Stations) ಸ್ಥಾಪನೆ.
- ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಬೆಳವಣಿಗೆಗೆ ಒತ್ತು; ಆಂದೋಲನದ ಮಾದರಿಯಲ್ಲಿ "ಹಸಿರು ಕರ್ನಾಟಕ" ಯೋಜನೆ ಜಾರಿಗೆ 10 ಕೋಟಿ ರೂ. ಅನುದಾನ.
- 750 ಮಿಲಿಮೀಟರ್‌ಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿರುವ ಅರಣ್ಯ ವೃದ್ಧಿಗಾಗಿ ಸರ್ಕಾರಿ ಬೆಟ್ಟ ಗುಡ್ಡದ ಜಮೀನುಗಳಿಗೆ ಬೇಲಿ ಸಂರಕ್ಷಣೆ ಕಲ್ಪಿಸಲು 40 ಕೋಟಿ ರೂ. ಅನುದಾನ.

**ಸಾರಿಗೆ**

- ಬೆಂಗಳೂರಿನ ಸಾರಿಗೆ ಸೇವೆಯ ಸಮಗ್ರ ಸುಧಾರಣೆಗಾಗಿ ಕಾರ್ಯತಂತ್ರ ಹಾಗೂ ಕ್ರಿಯಾಯೋಜನೆ ರೂಪಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಏಕೀಕೃತ ಭೂ ಸಾರಿಗೆ ಪ್ರಾಧಿಕಾರ ಸ್ಥಾಪನೆ.
- ಸಾರ್ವಜನಿಕ ಸಾರಿಗೆ ಸೇವೆ ಬಲವರ್ಧನೆ; ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ 100 ಕೋಟಿ ರೂ. ನೇರ ಸಹಾಯಧನ ನೀಡಲು ತೀರ್ಮಾನ.
- ಬೆಂಗಳೂರು ನಗರದಲ್ಲಿ ಎಲೆಕ್ಟ್ರಿಕ್ ವಾಹನಗಳ ಬಳಕೆ ಪ್ರೋತ್ಸಾಹಿಸಲು 4 ಕೋಟಿ ರೂ. ವೆಚ್ಚದಲ್ಲಿ 100 ಚಾರ್ಜಿಂಗ್ ಘಟಕ ಸ್ಥಾಪನೆ.
- ಸಾರಿಗೆ ಸಂಸ್ಥೆಗಳಿಗಾಗಿ 4236 ಬಸ್ ಖರೀದಿ; ಈ ಪೈಕಿ ವಿದ್ಯುತ್ ವಾಹನ ನೀತಿ–2017ರಡಿ ಬಿಎಂಟಿಸಿಯಿಂದ 80 ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಗೆ ಕ್ರಮ.

**ಇ–ಆಡಳಿತ**

- ಸಾರ್ವಜನಿಕರ ಕುಂದು ಕೊರತೆಗಳ ನಿರ್ವಹಣೆಗೆ ನಾಗರಿಕ ಸ್ನೇಹಿ ಕ್ರೋಢಿಕೃತ ಕುಂದು ಕೊರತೆ ನಿವಾರಣಾ ವ್ಯವಸ್ಥೆ; ಕಾಲ್‌ಸೆಂಟರ್, ಮೊಬೈಲ್ ಆ್ಯಪ್, ವೆಬ್ ಆ್ಯಪ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಕುಂದುಕೊರತೆ ನೋಂದಾಯಿಸಲು ನಾಗರಿಕರಿಗೆ ಅವಕಾಶ.
- ಗ್ರಾಮ ಪಂಚಾಯಿತಿ ಮಟ್ಟದವರೆಗೆ ವಿಡಿಯೋ ಸಂವಹನ ಸೌಲಭ್ಯ
- ಸರ್ಕಾರದ ವಿವಿಧ ಕುಟುಂಬ ಆಧಾರಿತ ಸವಲತ್ತುಗಳನ್ನು ಒದಗಿಸಲು ಕುಟುಂಬ ಗುರುತು (Family ID) ಸೃಜನೆ; ಅರ್ಜಿ ಸಲ್ಲಿಸದೆ ಸ್ವಯಂಚಾಲಿತವಾಗಿ ಸವಲತ್ತು ಅಥವಾ ಸಬ್ಸಿಡಿ ಪಡೆಯಲು ಸಹಕಾರಿ.

**ಕನ್ನಡ ಮತ್ತು ಸಂಸ್ಕೃತಿ**

- ರಾಜ್ಯಾದ್ಯಂತ ಆದಿ ಶಂಕರಾಚಾರ್ಯರ ಜಯಂತಿ ಆಚರಣೆ.

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ**

- ಡಾ॥ ರಾಜ್‌ಕುಮಾರ್ ಸ್ಮರಣಾರ್ಥ ಶ್ರೀ ಕಂಠೀರವ ಸ್ಟುಡಿಯೋ ಆವರಣದಲ್ಲಿ ಸುಸಜ್ಜಿತ ಯೋಗ ಕೇಂದ್ರ ಸ್ಥಾಪನೆ.

- ರಾಮನಗರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಚಲನಚಿತ್ರ ವಿಶ್ವವಿದ್ಯಾನಿಲಯ ಪ್ರಾರಂಭಿಸಲು 30 ಕೋಟಿ ರೂ. ಬಂಡವಾಳ ಹೂಡಿಕೆ; ರಾಮನಗರದ ಫಿಲ್ಮ್ ಸಿಟಿಯಲ್ಲಿ ಚಲನಚಿತ್ರಕ್ಕೆ ಸೇವೆ ಸಲ್ಲಿಸುವ ಉದ್ಯಮಗಳ ಪ್ರೋತ್ಸಾಹಕ್ಕೆ 40 ಕೋಟಿ ರೂ. ಬಂಡವಾಳ ಹೂಡಿಕೆ; ಹೊರದೇಶದಿಂದ ಚಿತ್ರ ನಿರ್ಮಾಣಕ್ಕಾಗಿ ಬರುವ ಕಲಾವಿದರು ಮತ್ತು ತಂತ್ರಜ್ಞರಿಗೆ ವಸತಿ ಹಾಗೂ ಇನ್ನಿತರ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು 20 ಕೋಟಿ ರೂ. ಅನುದಾನ.

**ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ**

- ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹೊಸೂರಿನಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಡಾ॥ ಎಚ್. ನರಸಿಂಹಯ್ಯರವರ ಸ್ಮರಣಾರ್ಥ ಅಂತರರಾಷ್ಟ್ರೀಯ ವಿಜ್ಞಾನ ಕೇಂದ್ರ ಸ್ಥಾಪನೆ.

**ಲೋಕೋಪಯೋಗಿ**

- ಹಾಸನ ನಗರದ ಸುಗಮ ಸಂಚಾರಕ್ಕಾಗಿ ಹಾಸನ ನಗರದ ಸುತ್ತ 30 ಕೋಟಿ ರೂ. ವೆಚ್ಚದಲ್ಲಿ ವರ್ತುಲ ರಸ್ತೆ ನಿರ್ಮಾಣ.

**ನಗರಾಭಿವೃದ್ಧಿ**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

- ಬೆಂಗಳೂರಿನಲ್ಲಿ ಉತ್ತಮ ಸಾರಿಗೆ ಸಂಪರ್ಕ ಏರ್ಪಡಿಸಲು 15825 ಕೋಟಿ ರೂ.ಗಳ ವೆಚ್ಚದಲ್ಲಿ ಪರಸ್ಪರ ಸಂಪರ್ಕ ಹೊಂದಿರುವ ಆರು ಎಲಿವೇಟೆಡ್ ಕಾರಿಡಾರ್‌ಗಳ ನಿರ್ಮಾಣ. KRDCL ಮುಖಾಂತರ

ಹೈಬ್ರಿಡ್ ಅನ್ಯೂಟಿ ಮೂಲಕ ಈ ಯೋಜನೆ ಜಾರಿಗೆ ಪ್ರಸಕ್ತ ಸಾಲಿನಲ್ಲಿ 1,000 ಕೋಟಿ ರೂ. ಅನುದಾನ.

**ಬೆಂಗಳೂರು ಮೆಟ್ರೋ ರೈಲು ನಿಗಮ**

- ಬೆಂಗಳೂರಿನ 'ನಮ್ಮ ಮೆಟ್ರೋ' ರೈಲು ಯೋಜನೆ ಹಂತ-3ರ ವ್ಯಾಪ್ತಿಯಲ್ಲಿ ಒಟ್ಟು 95 ಕಿ.ಮೀ.ಗಳ ಉದ್ದದ ಮಾರ್ಗಗಳ ಅಧ್ಯಯನ.

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

- ಬೆಳ್ಳಂದೂರು ಕೆರೆಯ ಸರ್ವಾಂಗೀಣ ಪುನಶ್ಚೇತನಕ್ಕೆ 50 ಕೋಟಿ ರೂ. ಅನುದಾನ; ಮುಂದಿನ ದಿನಗಳಲ್ಲಿ ಬೆಂಗಳೂರು ಗ್ರಾಮಾಂತರ ಪ್ರದೇಶಗಳ ಕೃಷಿ ಚಟುವಟಿಕೆಗಳ ಹನಿ ನೀರಾವರಿಗೆ ಈ ನೀರನ್ನು ಬಳಸುವ ಉದ್ದೇಶ.
- ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಭೂಮಾಲೀಕರಿಗೆ ಎರಡನೇ ಹಂತದಲ್ಲಿ 3000 ನಿವೇಶನ ಹಂಚಿಕೆಗೆ ಕ್ರಮ.

**ಪೌರಾಡಳಿತ**

- ರಾಜ್ಯದ 5 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಹುಮಹಡಿ ವಾಹನ ನಿಲುಗಡೆ ಸೌಲಭ್ಯ.
- ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ದಾಖಲೆಯಲ್ಲಿರುವ ಎಲ್ಲ ಆಸ್ತಿಗಳನ್ನು ಜಿಐಎಸ್ ಆಧಾರಿತ ಮ್ಯಾಪಿಂಗ್ ಮಾಡಲು ಕ್ರಮ.
- ರಾಜ್ಯದ 10 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಜಾಲದ ಮ್ಯಾಪಿಂಗ್ ಮಾಡಲು ಕ್ರಮ.
- ಹಾಸನ ನಗರದ ಚನ್ನಪಟ್ಟಣ ಕೆರೆಯ ಅಭಿವೃದ್ಧಿಗೆ 36 ಕೋಟಿ ರೂ. ಅನುದಾನ.
- ಮಂಡ್ಯ ನಗರದ ಸರ್ವತೋಮುಖ ಅಭಿವೃದ್ಧಿಗೆ 50 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್.

- ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳ ಪ್ರಕಾರ ಪ್ಲಾಸ್ಟಿಕ್‌ನಿಂದ ಪ್ಯಾಕ್ ಮಾಡಿದ ವಸ್ತುಗಳ ಮೇಲೆ ಶೇ. 3 ರಷ್ಟು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಶುಲ್ಕ ವಿಧಿಸಲು ಕ್ರಮ.

**ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

- ಪೀಣ್ಯ ಕೈಗಾರಿಕಾ ವಲಯದಲ್ಲಿ ರಾಸಾಯನಿಕ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣಕ್ಕೆ 10 ಕೋಟಿ ರೂ. ಅನುದಾನ.

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

- ಮೈಸೂರು ನಗರ ಹಾಗೂ ಮಾರ್ಗ ಮಧ್ಯದ 92 ಹಳ್ಳಿಗಳಿಗೆ ಹಳೇ ಉಂಡವಾಡಿ ಬಳಿ ಕಾವೇರಿ ನದಿಯಿಂದ ಹೆಚ್ಚುವರಿಯಾಗಿ 300 MLD ನೀರು ಪೂರೈಕೆ ಯೋಜನೆಗೆ 50 ಕೋಟಿ ರೂ. ಅನುದಾನ.

**ಕಾನೂನು**

- ಕರ್ನಾಟಕ ನ್ಯಾಯಾಂಗ ಪರಂಪರೆಯನ್ನು ಜನಸಾಮಾನ್ಯರಿಗೆ ಪರಿಚಯಿಸುವ ಮ್ಯೂಸಿಯಂ ಸ್ಥಾಪನೆಗೆ 1 ಕೋಟಿ ರೂ. ಅನುದಾನ.
- ಬೆಂಗಳೂರಿನ ಬಾರ್ ಕೌನ್ಸಿಲ್‌ನ ನ್ಯಾಯಾಂಗ ಚಟುವಟಿಕೆಗಳಿಗೆ 5 ಕೋಟಿ ರೂ. ಆರ್ಥಿಕ ನೆರವು.

**ಆರ್ಥಿಕ**

- ಮೊದಲ ಹಂತದಲ್ಲಿ ದಿನಾಂಕ 31–12–2017ರವರೆಗೆ ರೈತರು ಮಾಡಿದ ಎಲ್ಲಾ ಸುಸ್ತಿ ಬೆಳೆ ಸಾಲ ಒಂದೇ ಹಂತದಲ್ಲಿ ಮನ್ನಾ. ಸಕಾಲದಲ್ಲಿ ಸಾಲ ಮರುಪಾವತಿ ಮಾಡಿರುವ ಸುಸ್ತಿದಾರರಲ್ಲದ ರೈತರ ಪ್ರತಿ ಸಾಲ ಖಾತೆಗೆ ಮರುಪಾವತಿ ಮಾಡಿರುವ ಸಾಲದ ಮೊತ್ತ ಅಥವಾ 25,000 ರೂ. ಗಳಲ್ಲಿ ಯಾವುದು ಕಡಿಮೆಯೋ ಅದನ್ನು ತುಂಬಲು ತೀರ್ಮಾನ.

- ಮನ್ನಾ ಮಾಡುವ ಸಾಲದ ಮೊತ್ತ ಪ್ರತಿ ರೈತ ಕುಟುಂಬಕ್ಕೆ ಗರಿಷ್ಠ 2 ಲಕ್ಷ ರೂ.; ಇದರಿಂದಾಗಿ ರೈತರಿಗೆ ಸುಮಾರು 34,000 ಕೋಟಿ ರೂ. ಲಾಭ; ಸರ್ಕಾರಿ ಅಧಿಕಾರಿಗಳು ಮತ್ತು ಸಹಕಾರಿ ಕ್ಷೇತ್ರದ ಅಧಿಕಾರಿಗಳ ಕುಟುಂಬಗಳು ಹಾಗೂ ಆದಾಯ ತೆರಿಗೆ ಕಟ್ಟಿರುವ ರೈತರು ಹಾಗೂ ಇತರ ಅನರ್ಹ ಕೃಷಿ ಸಾಲಗಾರರು ಸಾಲ ಮನ್ನಾ ಯೋಜನೆಯಿಂದ ಹೊರಗೆ.
- ರೈತರಿಗೆ ಹೊಸ ಸಾಲ ಪಡೆಯಲು ಅನುಕೂಲವಾಗುವಂತೆ ಸರ್ಕಾರವು ಅವರ ಸುಸ್ತಿ ಖಾತೆಯಲ್ಲಿರುವ ಬಾಕಿ ಮನ್ನಾ ಮಾಡಿ ಋಣಮುಕ್ತ ಪತ್ರ ನೀಡಲು 6500 ಕೋಟಿ ರೂ. ಅನುದಾನ. ಇದಲ್ಲದೆ ಹಿಂದಿನ ಸರ್ಕಾರವು ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರು ಮಾಡಿದ ಸಾಲ ಮನ್ನಾದ ಬಾಕಿ ಉಳಿದ 4000 ಕೋಟಿ ರೂ. ಮೊತ್ತ ಪಾವತಿಗೆ ಕ್ರಮ.

**ತೆರಿಗೆ ಪ್ರಸ್ತಾವನೆಗಳು**

**ವಾಣಿಜ್ಯ ತೆರಿಗೆಗಳು – ಸರಕು ಮತ್ತು ಸೇವಾ ತೆರಿಗೆ**

- ಎಲ್ಲಾ ವಿಭಾಗೀಯ ಕಛೇರಿಗಳಲ್ಲಿ ಅತ್ಯಾಧುನಿಕ ಸ್ವಯಂಚಾಲಿತ ಸರಕು ಮತ್ತು ಸೇವಾ ತೆರಿಗೆ ಸಹಾಯ ಪೀಠ ಸ್ಥಾಪನೆ.
- ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನದಲ್ಲಿ ಅನುಭವ ಹೊಂದಿರುವ ಇತರ ದೇಶಗಳಲ್ಲಿ ನಮ್ಮ ಅಧಿಕಾರಿಗಳಿಗೆ ಸೂಕ್ತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ.

**ಮೌಲ್ಯವರ್ಧಿತ ತೆರಿಗೆ**

- ದಿನಾಂಕ 30ನೇ ಅಕ್ಟೋಬರ್ 2018 ರ ಒಳಗಾಗಿ ಪೂರ್ತಿಯಾಗಿ ತೆರಿಗೆ ಮೊತ್ತ ಪಾವತಿಸುವವರಿಗೆ, ಶೇ.100ರಷ್ಟು ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಲು ಒಂದು ಕರಸಮಾಧಾನ ಯೋಜನೆ ಜಾರಿ.
- ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣವು ಮೇಲ್ಮನವಿಯ ವಿಲೇವಾರಿ ಮಾಡಲು ಇರುವ ಅವಧಿಯನ್ನು ತಡೆಯಾಜ್ಞೆ ಜಾರಿಗೆ ಬಂದ ದಿನದಿಂದ ಮೂರು ವರ್ಷಗಳಿಗೆ ವಿಸ್ತರಣೆ.

**ಮಾರಾಟ ತೆರಿಗೆ**

- ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆ ದರ ಶೇ. 2ರಷ್ಟು ಹೆಚ್ಚಳ.

**ಅಬಕಾರಿ**

- ಅಬಕಾರಿ ಇಲಾಖೆಗೆ 2018–19ನೇ ಸಾಲಿಗೆ 18,750 ಕೋಟಿ ರೂ. ರಾಜಸ್ವ ಸಂಗ್ರಹಣೆ ಗುರಿ; ಪರಿಷ್ಕೃತ ರಾಜಸ್ವ ಸಂಗ್ರಹ ಗುರಿ–19,750 ಕೋಟಿ ರೂ.; ಜೂನ್–2018 ರ ಅಂತ್ಯಕ್ಕೆ 4,674 ಕೋಟಿ ರೂ.ಗಳ ರಾಜಸ್ವ ಸಂಗ್ರಹ.
- ಮದ್ಯದ ಎಲ್ಲಾ 18 ಘೋಷಿತ ಬೆಲೆ ಸ್ಲಾಬ್‌ಗಳ ಮೇಲಿನ ಹೆಚ್ಚುವರಿ ಅಬಕಾರಿ ಸುಂಕದ ಹಾಲಿ ಇರುವ ದರಗಳ ಮೇಲೆ ಶೇಕಡ 4 ರಷ್ಟು ಹೆಚ್ಚಳ.

**ಸಾರಿಗೆ**

- 2018–19ರ ಸಾಲಿಗೆ ರೂ.6,656 ಕೋಟಿ ಮೋಟಾರು ವಾಹನ ತೆರಿಗೆ ಸಂಗ್ರಹ ಗುರಿ ನಿಗದಿ
- ಖಾಸಗಿ ಸೇವಾ ವಾಹನ ತೆರಿಗೆ ಪ್ರತಿ ಚದರ ಮೀಟರ್‌ಗೆ ಶೇಕಡ 50 ರಷ್ಟು ಹೆಚ್ಚಳ.

**ಇಂಧನ**

- ವಿದ್ಯುತ್ ಬಳಕೆ ಮೇಲಿನ ತೆರಿಗೆ ಶೇಕಡ 9ಕ್ಕೆ ಹೆಚ್ಚಳ. ಸ್ವಂತ ಬಳಕೆಯ ವಿದ್ಯುತ್ ಮೇಲಿನ ತೆರಿಗೆ ದರ ಪ್ರತಿ ಯೂನಿಟ್ ದರ 20 ಪೈಸೆಗೆ ಹೆಚ್ಚಳ.

* * * *

# Budget 2018-19

## Highlights

## Budget overview

- Budget estimate (Consolidated Fund) Rs.2,18,488 crore.
- Total receipts Rs.2,13,734 crore. Revenue receipts Rs.1,66,396 crore. Public debt Rs.47,134 crore and capital receipts Rs.204 crore.
- Total expenditure Rs.2,18,488 crore. Revenue expenditure Rs.1,66,290 crore and capital expenditure Rs.41,063 crore and loan repayment Rs.11,136 crore.
- Continuation of all programmes announced in the Budget presented in the House on 16th February, 2018.

**Agriculture**

- Stress will be given in the field of agriculture activities with farmers participation; formation of Karnataka State Farmers Advisory Committee consisting of two progressive farmers from each district.
- Grant of Rs.150 crore in the first stage of 5,000 hectares of dry land irrigation on Israel model in the districts of Kolar, Chitradurga, Koppal and Gadag.
- Grant of Rs.50 crore to the project giving stress to Zero Capital Natural Farming on Andhra Pradesh model.
- Formation of High Level Agriculture Co-ordination Committee under the Chairmanship of Chief Minister to achieve co-ordination between different departments of agriculture sector.
- Action to implement State Farmer Producing Organisation policy to strengthen farmers' organisation and capacity building.
- Rs.10 crore to be earmarked to formulate a scheme to encourage farmers to grow soapnut.
- Encouragement to farmers by providing small automated oil mills to produce pure oils at their levels. Grant of Rs.5 crore for this programme.
- Grant of Rs.3 crore to propagate Vacuum Technology developed by Dharwad Agriculture University.
- Grant of Rs.5 crore to encourage Start-Up companies for complementing new innovations in agriculture.

- Grant of Rs.2 crore for development of Karnataka Antharaganga Micro Irrigation Corporation Limited.
- Grant of Rs.5 crore for establishment of Karnataka State Seeds and Organic Certification Institute.

**Horticulture**

- Provision of Rs.150 crore to adopt Israel model of irrigation in the Horticulture sector in 5,000 hectares each in Karwar, Tumakuru, Yadagiri and Haveri districts.
- Assistance of Rs.190 crore to protect the interest of coconut growers due to un-productivity because of drought situation in 2017.

**Sericulture**

- Grant of Rs.1 crore during 2018-19, out of Rs.3 crore to be spent for establishing silk cocoon market in Mysuru district.
- Grant of Rs.5 crore to rejuvenate Karnataka State Silk Research and Development Institute in Talagattapura.
- Grant of Rs.2 crore to create marketing opportunities for silk by-products.
- Grant of Rs.5 crore for rejuvenation of Karnataka Silk Industries Corporation (K.S.I.C.) at Channapattana.

**Animal Husbandry**

- Three Frozen Semen Distribution centres to be established at divisional level in Dharwad, Kalaburagi and Mysuru at an expenditure of Rs.2.25 crore.

- Provision of Rs.3 crore to establish Green Fodder Production Units using Hydroponics method.
- Grant of Rs.50 crore to establish a mega diary of 15 lakh litre capacity in Hassan Milk Union.

**Fisheries**

- Grant of Rs.4 crore under "Inland Fisheries Incentive Scheme".

**Co-operation**

- Grant of Rs.5 crore to implement 'Kayaka' to 3,000 Self Help Groups to encourage taking up self employment.
- Extension of Micro Finance facility to street vendors/small vendors of 5 cities in the State under "Badavara Bandu" mobile service.

**SKILL DEVELOPMENT**

- Grant of Rs.2 crore to impart training to the probable entrepreneurs in all districts through Centre for Entrepreneurship Development of Karnataka (CEDOK) under Disha scheme to benefit 1 lakh people.
- Grant of Rs.2 crore to Karnataka International Migrants Centre for necessary training and encouragement to the State youth to have employment and livelihood outside the country.

**PRIMARY AND SECONDARY EDUCATION**

- A special package of Rs.150 crore for the repairs of Government Primary, High School and Pre-university college buildings.

- Grant of Rs.5 crore to strengthen training centres of Bharath Scouts and Guides.
- English medium classes to commence in 1000 Government Kannada Primary Schools.
- Installation of biometric instruments in all 48 thousand Government schools in the State to monitor attendance of teachers and children in next 3 years. Grant of Rs.5 crore in this year.
- Shifting of Anganavadi centres under Women and Child Welfare Department to strengthen as 'Balasnehi centres' to selected 4,100 Government primary school's premises; commencement of LKG, UKG classes.
- Action to merge 28,847 Government and aided schools with less admission rate in one kilometer radius with 8,530 nearest Government schools to give quality education to the children.

**Higher Education**

- A special package of Rs.250 crore for the development of infrastructure of Government graduate and post graduate colleges.
- Establishment of the new universities wherein skill is the foundation, grant of Rs.9 crore for university relating to sports and body building in Tumakuru district, a Homeland Security University in Shivamogga district, a tourist university at the historical place of Hampi.

- Essential training to be provided through Karnataka Examination Authority (KEA) through ICT (Information and Communication Tools) for various competitive examinations.
- Grant of Rs.3 crore to open Crowd Funding portal to seek assistance from old students of the school. Assistance to schools through this portal under Corporate Social Responsibilities.

**Health and Family Welfare**

- Extension of the scope of the medical help line and Emergency Response Services available with No.108 and 104. Action to combine Mother and Child Health Services and Mental Health Care Services with this service.
- Expenditure of Rs. 40 crore for the plan of strengthening the system of drug control during the next two years.
- Rs.30 crore earmarked for transplantation of heart, kidney, liver etc., for poor patients.
- Establishment of Cardiology, Oncology Health Service Unit in Vijayapura district hospital.

**Medical Education**

- Establishment of new Medical College at Kanakapura.
- Grant of Rs. 30 crore for upgradation of Mandya Medical Sciences Institute Hospital to 800 bed hospital.

- Grant of Rs.12 crore for establishment of separate unit at Kidwai Cancer Hospital for treatment of bone marrow transplant.
- Action to open 300 bed Super Speciality Hospital in Ramanagara at an expenditure of Rs.40 crore.
- Opening of new Super Speciality Hospitals in Belagavi, Kalaburagi and Mysuru cities to provide medical services relating to heart, cancer and related diseases. Establishment of 450 bed capacity new hospitals in medical colleges of Gadag, Koppal, Chamarajanagar and Hassan cities with a provision of Rs.200 crore.

**Tourism**

- Priority for employment generation through tourism.
- Resolve for Comprehensive development of tourism in Beluru, Hampi and Vijayapura. In this direction, investment of Rs.60 lakh in share capital in private training institute coming forward to give skill development training. Grant of Rs.20 crore to Local Government Bodies to maintain eco-system and food cleanliness.
- Investment of 30% share capital with private institutions coming forward to develop basic infrastructure for tourism. Rs.80 crore is earmarked for investment in tourism industry.
- Provision of Rs.80 crore to KSTDC to develop hotel facility.

- Construction of 3 Model way side facilities in prominent highways for the benefit of tourists.
- Grant of Rs.5 crore to provide additional facilities at world famous Gaganachukki and Bharachukki water falls for the benefit of tourists.
- Development of Arts and Crafts village and Children World Project in Kanva Reservoir area near Ramanagara with private partnership.

**Social Welfare**

- Increase of subsidy by Rs.50,000 under Ganga Kalyana Scheme.
- "Social Entrepreneurship Scheme," to provide financial assistance of maximum of Rs.10 lakh for 5,000 SC/ST unemployed youth to commence income accruing activities.
- Employment based technical training to 5000 unemployed SC/ST's with an expenditure of Rs.15 crore.
- Assistance to SC/ST graduates for providing training in competitive examinations in collaboration with private training institute in Kalaburagi City.
- Implementation of "Pragathi Colony" Scheme with a grant of minimum of Rs.1 crore and maximum of Rs.5 crore for comprehensive development of colony/Thanda with large number of SC/ST population.

- Grant of Rs.2 crore for providing training to talented SC/ST sports person in prestigious sports training institute.
- Construction of Model/New Villages for Scheduled Caste and Scheduled Tribes; priority to tribal communities.
- Training to Scheduled Tribe youth and unemployed persons to take up self employment in taxi, home stay, etc.
- Grant of Rs.10 crore for the development of socially most backward communities-Shillekyatha, Dombidasa, Gowli, Heluva, Shikaries, Hoovadiga, Kanchugara, Kammara, Darji, Devadiga, Budubudike, Thigala, Badige, Hatgara, Kareokkaliga etc.
- Total grant of Rs.25 crore to various religious peetas and associations striving to provide Dasoha, Education, Social Service, etc. in a secular way.

**Food and Civil Supply**

- Value addition to Annabhagya Scheme; distribution of 5 kg rice free of cost, ½ kg toordal with subsidized rate and 1 kg palm oil, 1 kg salt with iodine and iron content and 1 kg sugar to each BPL card holder.
- Organizing Food Safety Month in a year; annual review of ration cards with the co-operation of Vigilance Committee.

**Women and Child Welfare**

- Launching of "Chief Minister's Mathrusree Scheme"; to provide total allowance of Rs.6,000 comprising allowance for 3 months to pregnant women and allowance for 3 months to lactating mothers of BPL families at Rs.1,000 per month, with a grant of Rs.350 crore.
- Increasing in unit expenditure to Rs.1 lakh under "Aadhaar" self employment scheme with 50% subsidy and 50% by way of bank loan.
- Grant of Rs.5 crore to carry out survey of persons covering 21 types of disabilities under the Rights of Persons with Disability Act, 2016.
- Old Age Home presently existing one in each district to be extended to all sub divisions of the State.
- Grant of Rs.4 crore for waiver of loan advanced by the National Handicapped Finance and Development Corporation and interest accrued from 2014 to the mentally challenged persons.
- Establishment of campus for training wardens taking care of mentally challenged in 20 acres of land with private participation.
- Establishment of Special Teachers Training Centre in Government Deaf Children School, Indiranagar in partnership with Private Institutions.
- Grant of Rs.1 crore for providing scholarship to the mentally challenged students pursuing of PhD and

those studying in prestigious foreign educational institutions.

- Implementation of life security programmes to Sex workers in co-ordination with various development departments.

**Commerce and Industries**

- "Compete with China" project for enhancement of production capacity of industrial sector in Karnataka.
    - Development of Kalaburagi district as Solar District.
    - Development of house hold LED lights production industry in Chitradurga district.
    - Development of Hassan district as Bathroom floor tiles and Sanitary goods producing district.
    - Emphasis to establish Toys production unit in Koppal, Farm Equipments Production Unit in Bidar district, IC chip manufacturing zone in Mysuru, Textile Industry in Bellary, Mobile Phone Accessories Industry in Chickballapur, sports and fitness equipment manufacturing in Tumakuru.
    - Generation of 8 lakh jobs expected at the rate of 1 lakh jobs in each district.
    - Investment of Rs.14,000 crore by the Government of Karnataka in the coming years for the above programmes.

- Action to formulate Centralized Inspection System of related departments in co-ordination with Trade and Industry.
- Action to fix final allotment rate will be taken immediately after KIADB and KSIIDC develop the industrial areas/estates.
- Annual incentive of Rs.10,000 to each skilled worker working in small and micro industries to encourage Coconut Fiber industry.
- 10% Market Development Subsidy to Small and Micro Coconut Fibre Industries.
- Action to simplify the process of purchasing agricultural land for industrial purpose; employment generation opportunities in rural areas.
- Action to organize Mining and Mines Safety Procedures Training Course to all quarry contractors. Compulsory training for quarry contractors, presently in operation and for the contractors obtaining new licenses.
- Action to provide information about the current quarry contracts and crushers in App to the general public for their benefit purchase of building stones, jelly etc. at wholesale prices.
- Opening Stocks Yards to make available good quality sand and jelly at competitive rates.
- Announcement of new Textile Policy to encourage readymade garment sector.

- Establishment of modern Handloom Centres for transfer of new designing technology to weavers.
- Revival and modernization of a century old Karnataka Implement Manufacturing Company at cost of Rs.10 crore in Hassan.
- Grant of Rs.5 crore for establishment of Alternative Packing Technology Development Institute in the background of ban of plastic packing materials.

**Public Industries**

- Inclusion of 3 profit making State Government companies as Listed companies in the share market.

**Energy**

- Establishment of 35 Electrical Sub Centres to enhance power transmission system and upgradation of 75 Sub centres.
- Implementation of project to convert all Overhead lines as Underground cables in phased manner in Bengaluru city.

**Housing**

- Proposal to extend 'Chief Minister's one lakh houses' scheme implemented in Bengaluru city to all the cities.
- Construction of multi floor houses for the poor in Bengaluru city.
- Proposal to develop Slum localities in the municipal areas on the model of Private Public Participation with guidelines from 2019-20.

- Allotment of houses to disabled beneficiaries in accordance with demand by receiving applications online.

**Rural Development and Panchayath Raj**

- Initiation of scheme for supply of 85 LPCD drinking water from rivers or reservoirs at an estimated cost of Rs.53,000 crore. Action for detailed project report.
- Implementation of multi village drinking water supply project in 29 villages of Srirangapatna Taluk at a cost of Rs. 42.9 crore.

**Water Resources**

- Action to implement Mekedhatu project.
- Action to develop Krishnarajasagar on the model of America's Disneyland with Public Private Participation. Grant of Rs.5 crore to prepare the detailed project report.
- The judgment of the Mahadayi River dispute Tribunal may come in the month of August 2018. As per the Tribunal judgment, works will be under taken.
- The rehabilitation and reconstruction work of 3rd stage of Upper Krishna Project at a fast pace. Action to store additional water in the Alamatti Reservoir. The government proposes to complete all irrigation projects within the next 5 years.

**Minor Irrigation**

- Implementation of project to fill 160 tanks in the area of Dudda and Shanthigrama Hobli of Hassan Taluk at a cost of Rs.70 crore.
- To fill water to Dudda and other tanks from Lokapavani River of Mandya District and to provide drinking water facility to the villagers of Mandya Taluka villages, a project with a grant of Rs.30 crore.
- Implementation of project at a cost of Rs.100 crore for irrigation facility from Krishna River to about 10,225 hectares land of Chikkodi Taluk of Belagavi District.

**Revenue**

- Enhancement of monthly pension under the present Sandhya Suraksha Project to the beneficiaries to Rs.1000 with effect from 1st November 2018, to 32.92 lakh senior citizens.
- Land Re-Survey work to be initiated in 5 districts.
- Grant of Rs.10 crore to 50 Nadakacheries for basic facilities.

**Endowment**

- Grant of Rs. 25 crore for the purpose of development of economically backward people in the Brahmin community.

**Forest, Environment & Ecology**

- It is proposed to establish 42 Continuous Ambient Air Quality Monitoring Stations at the cost of Rs.96 crore under the District Mineral Fund.

- Stress to the development of Social Forestry in the State. Grant of Rs. 10 crore to implement 'Hasiru Karnataka' project on a movement basis.
- Grant of Rs.40 crore for fencing protection for the development of forest in the government hill areas in the State, where rainfall is more than 750 millimeter.

**Transport**

- Establishment of an Integrated Road Transport Authority under the chairmanship of Chief Minister to formulate a comprehensive working and action plan.
- Strengthening of public transport service. Grant of direct subsidy of Rs.100 crore to Bengaluru Metropolitan Transport Corporation.
- It is proposed to establish 100 charging units at a cost of Rs.4 crore to encourage usage of electric vehicles in order to control increasing air pollution in Bengaluru city.
- Transport Corporations to purchase 4236 new buses for public use. Out of this, under the Karnataka Government Electric Vehicle Policy – 2017, 80 electric buses to be operated through Bengaluru Metropolitan Transport Corporation.

**E-Governance**

- Creation of integrated grievances redressal system in Karnataka by unifying all existing sub-systems through call centre, mobile applications, web applications and social media.

- Provision of video conference facility upto Grama Panchayat level.
- Creation of family ID to provide different family oriented facilities to get benefits of different programmes or subsidies automatically without submission of application.

**Kannada and Culture**

- Shankaracharya Jayanthi to be celebrated all over the state.

**Information and Public Relation**

- In memory of Dr. Rajkumar, a well-equipped yoga centre to be established in Sri Kanteerava Studio premises.
- Investment of capital of Rs.30 crore to open a Film University at Ramanagara with private partnership; Investment of Rs.40 crore capital to encourage industries providing services to film industry in Ramanagara film city. Grant of Rs.20 crore for the artists and technicians to provide residential and other facilities coming from other countries for film production.

**Information Technology, Bio-technology, Science and Technology**

- Establishment of an International Science Centre in memory of Dr. H. Narasimmaiah at his birth place Hosur of Gowribidanur taluk in Chikkaballapur district with private partnership.

**Public Works**

- Construction of ring road will be constructed around Hassan city for smooth transport at a cost of Rs.30 crore.

**Urban Development**

**Bruhath Bengaluru Mahanagara Palike**

- Construction of six interconnected elevated corridors at a cost of Rs.825 crore under hybrid annuity to provide good transport communication in Bengaluru. This scheme to be taken up through hybrid annuity through KRDCL. For this programme, with a grant of Rs.1000 crore is earmarked for the current year.

**Bengaluru Metro Rail Corporation**

- 95 KM length routes under stage 3 of 'Namma Metro' Rail scheme under implementation.

**Bengaluru Development Authority**

- Action to provide water of Bellandur lake for agricultural activities of Bengaluru rural areas through drip irrigation.
- Action to distribute 3000 sites in 2nd stage of Nadaprabhu Kempegowda Layout to the land owners.

**Municipal Administration**

- Establishment of multi-level vehicle parking facility in 5 Municipal Corporations of the State under Public Private Partnership.
- GIS based mapping of all properties coming under urban local bodies by using satellite image.

- Action for mapping of water supply and drainage network coming under 10 city municipal corporations of the State.
- Grant of Rs.36 crore for the development of Channapatna lake in Hassan city.
- A special package of Rs.50 crore for the all round development of Mandya city.
- Issue of direction to the local bodies in Karnataka State to levy plastic waste management fee at 3% on MRP basis on sale of goods packed with plastic within their local area.

**Bengaluru Water Supply and Sewerage Board**

- Grant of Rs.10 crore to construct a chemical waste treatment unit in Peenya Industrial Zone.

**Karnataka Water Supply and Sewerage Board**

- Grant of Rs.50 crore to provide additional 300 MLD water from Cauvery river near Hale Undavadi to Mysuru city and 92 villages in between.

**Law**

- Grant of Rs.1 crore set up a museum with judicial records to introduce the common people.
- Grant of Rs.5 crore financial aid to Bengaluru Bar Council for judicial service.

**Finance**

- Waiver of all defaulted crop loans of the farmers made upto 31-12-2017 in the first stage. Apart from this, to help the farmers who repaid the loan within time, as an encouragement to the non-defaulting farmers, it is decided to credit the repaid loan amount or Rs.25,000 whichever is less to each of the farmer's account.
- To limit the loan waiver amount to Rs. 2 lakh per family. Due to this crop loan waiver scheme, farmers will get the benefit of Rs.34,000 crore. The families of Government officials and officials of the co-operative sector, farmers who have paid income tax for the past 3 years and other ineligible farm loan recipients will be outside the purview of this loan waiver scheme.
- To facilitate the farmers to avail new loans, action will be taken by the Government to issue clearance certificate by waiving the arrears from the defaulting account. For this purpose, Rs.6500 crore is earmarked in 2018-19 budget. Apart from this, the previous Government has waived loan of Rs.8,165 crore made by farmers in co-operative banks and out of this, Rs.4,165 crore had been released during the previous year. Allocation has also been given to pay the remaining Rs.4,000 crore in this budget.

## TAX PROPOSALS

### COMMERCIAL TAXES

### GOODS AND SERVICES TAX

- State-of-the-art automated GST Help Desks will be set up in all divisions; Government will draw appropriate training programmes for the officers in other countries having GST implementation experience.

### VALUE ADDED TAX

**Rationalization and Administrative measures:**

- A Karasamadhana Scheme will be introduced to waive 100% of penalty and interest on payment of full tax on or before 30th October, 2018
- The period prescribed for disposal of appeal by the Karnataka Appellate Tribunal will be enhanced to 3 years from the date of stay order.

### SALES TAX

- Increase in the rate of tax on petrol and diesel by 2 per cent.

### EXCISE

- The revenue target fixed for the Excise department for the year 2018-19 is Rs.18,750 crore; revised target for is Rs.19,750 crore; revenue collection till the end of June is Rs.4,674 crore.
- Increase the existing rates of Additional Excise Duty on IML by 4 percent on all 18 slabs.

**TRANSPORT**

- The revenue target fixed from Motor Vehicle Taxes is Rs.6656 Crore.
- Increase in Motor Vehicles taxes by 50 per cent for private service vehicles based on Sq. Meter of floor area.

**ENERGY**

- The taxation on consumption of electricity increased to 9%; The rate of taxation on consumption of captive energy increased to 20 paise per unit.

* * * *